



(6ನೇ ಪುಟದಿಂದ)

ಹುಳು ಯಾವುದು.. ಎಂದು ಗೊತ್ತಾಗದ ಹಾಗೆ ಎಲೆಗಳ ಜೊತೆಗೆ ಕೋಮೊಪ್ಲೇಜ್ ಆಗಿವೆ. ಇದು ಅವುಗಳ ಪ್ರೆಡೇಟರುಗಳಾದ, ಜೇಡ, ಪ್ರೈಯಿಂಗ್ ಮ್ಯಾಂಟಿಸ್, ದುಂಬಿಗಳು ಮತ್ತು ಇತರ ಪಕ್ಷಿಗಳಿಂದ ರಕ್ಷಿಸಿಕೊಳ್ಳಲು ದೇವರ ಸಹಜ ಸೃಷ್ಟಿ!

ನನ್ನ ಜೇಬಿನಲ್ಲಿ ಸದಾ ಒಂದು ಪೆನ್ನು, ಚೂರು ಕಾಲಿ ಕಾಗದ, ಒಂದಷ್ಟು ರಬ್ಬರ್ ಬ್ಯಾಂಡ್‌ಗಳು ಮತ್ತು ಸಣ್ಣ ಕಟ್ಟರ್ (ಚಾಕು) ಇರುತ್ತವೆ. ಚಾಕುವಿನಿಂದ ಗಿಡದಲ್ಲಿ ಆ ಹಸಿರು ಹುಳುಗಳಿರುವ ಒಂದು ಕಾಂಡವನ್ನು ನಿಧಾನವಾಗಿ ಕತ್ತರಿಸಿ. ಹುಳುಗಳಿಗೆ ನೋವಾಗದ ಹಾಗೆ ನನ್ನ ಬ್ಯಾಗಿನಲ್ಲಿ ಸೇರಿಸಿದೆ. ಹಂಪ್‌ಗಳಲ್ಲಿ ಕುಲುಕದ ಹಾಗೆ ನನ್ನ ಟೂ ವೀಲರ್‌ನಲ್ಲಿ ಮನೆಗೆ ಅವುಗಳನ್ನು ತಂದಿದ್ದೆ.

ನೋಡಲು ಅವರೇಕಾಯಿ ಹುಳುಗಳಿಗಿಂತ ಚಿಕ್ಕದಾಗಿ ಸಣ್ಣದಾಗಿದ್ದ ಅವುಗಳನ್ನು ನನ್ನಾಕೆ ನೋಡಿ. 'ಓಹ್ ಇನ್ನಷ್ಟು ಹುಳಗಳನ್ನು ತಂದಿರಾ. ಮುಗಿಯಿತು ಬಿಡಿ. 'ಇನ್ನು ಹೆಂಡತಿ, ಸಂಸಾರ, ಎಲ್ಲ ಮರೆತಂತೆ' ಅಂತ ಗೊಣಗಿದಳು. ನಾನು ತಂದಿದ್ದ ಕಾಂಡದಲ್ಲಿ ನಾಲ್ಕು ಹುಳುಗಳಿದ್ದವು. ಅವುಗಳಲ್ಲಿ ಎರಡು ದೊಡ್ಡದಾಗಿ ಸುಮಾರು ಮುಕ್ಕಾಲು ಇಂಚಿನಷ್ಟು ಬೆಳೆದು ಸರಸರ ಹರಿದಾಡುತ್ತಿದ್ದವು. ಇನ್ನೆರಡು ಒಂದು ಸೆಂಟಿಮೀಟರ್ ಇದ್ದು ನಿಧಾನವಾಗಿ ಎಲೆಗಳನ್ನು ತಿನ್ನುತ್ತಿದ್ದವು.

ಎರಡು ದಿನ ಕಳೆಯಿತು. ನನಗೂ ತಿಂಗಳ ಮೊದಲ ವಾರ ಅವುಗಳನ್ನೇ ನೋಡಿಕೊಂಡು ಕೂರಲೂ ಆಗುವುದಿಲ್ಲವಲ್ಲ. ಹಣ ವಸೂಲಿ, ಇತ್ಯಾದಿ ಕೆಲಸಗಳಿಗಾಗಿ ಬ್ಯುಸಿಯಾಗಿದ್ದೆ. ಮೂರನೆ ದಿನ ನೋಡುತ್ತೇನೆ. ದೊಡ್ಡವೆರಡು ಪ್ಯೂಪ ಆಗಿವೆ!

ಅಷ್ಟರಲ್ಲಿ ಇನ್ನೆರಡು ತಮ್ಮಂದಿರು ತಿಂದುಂಡು ಬೆಳೆಯುತ್ತಿದ್ದವು. ಅಣ್ಣಂದಿರು ಪ್ಯೂಪ ಆಗುವುದನ್ನು ನೋಡಲಾಗಲಿಲ್ಲ. ಇವುಗಳನ್ನು ಸರಿಯಾಗಿ ಗಮನಿಸಬೇಕು ಅಂದುಕೊಂಡು ಅವುಗಳನ್ನು ಸಂಪೂರ್ಣವಾಗಿ ಗಮನಿಸತೊಡಗಿದೆ. ಜೊತೆಗೆ ಗೋಡೆಯ ಮೇಲಿನ ಹಲ್ಲಿಗಳು, ಇದ್ದಕ್ಕಿದ್ದಂತೆ ಹಾಜರಾಗುವ ಜೇಡಗಳು, ಏನೇ ಸಿಕ್ಕರೂ ಬಲಿಹಾಕಿ ಶೇಖರಿಸುವ ಕೆಂಪಿರುವೆಗಳಿಂದಲೂ ಈ ಹುಳು ಮತ್ತು ಪ್ಯೂಪಗಳನ್ನು ರಕ್ಷಿಸಬೇಕಿತ್ತು.

ನಾಲ್ಕನೆ ದಿನ ಮಧ್ಯಾಹ್ನದ ಹೊತ್ತಿಗೆ ಮೂರನೆ ತಮ್ಮ ತನ್ನ ಹೊರಗಿನ ಚರ್ಮವನ್ನು ಹಾವಿನ ಪೊರೆಯಂತೆ ಕಳಚಿ ತನ್ನ ದೊಡ್ಡ ಆಕಾರವನ್ನು ಸಂಪೂರ್ಣ ಕುಗ್ಗಿಸಿ ಅರ್ಧಭಾಗಕ್ಕೆ ತಂದು, ತನ್ನ ದೇಹದ ಹಿಂಭಾಗವನ್ನು ಕಾಂಡದ ಒಂದು ತುದಿಗೆ ಅಂಟಿಸಿದ! ಮತ್ತೊಂದು ತುದಿಯನ್ನು (ತಲೆ ಭಾಗ) ಕಾಂಡದ ಮತ್ತೊಂದು ತುದಿಗೆ ಸಣ್ಣ ದಾರದ ಎಳೆಯಂತೆ ಅಂಟನ್ನು ತನ್ನ ದೇಹದಿಂದಲೇ ಸೃಷ್ಟಿಸಿ ಅದರೊಳಗೆ ತನ್ನ ಕುಗ್ಗಿಸಿದ ದೇಹವನ್ನು ತೂರಿಸಿ ನೇತಾಡತೊಡಗಿದ. ಇದಿಷ್ಟು ಪ್ರಕ್ರಿಯೆ ನಡೆದಿದ್ದು ಸುಮಾರು ನಾಲ್ಕು ತಾಸಿನಲ್ಲಿ! ಮರುದಿನ ಕೊನೆ ತಮ್ಮನದೂ ಇದೇ ಪ್ರಕ್ರಿಯೆ! ಮರುದಿನ ಅವೆರಡು ಹಚ್ಚ ಹಸುರಿನ ಬಣ್ಣ ಹೊತ್ತ ಪ್ಯೂಪಗಳಾಗಿ ಬಿಟ್ಟಿವೆ.

ದೊಡ್ಡಣ್ಣನಿದ್ದ ಪ್ಯೂಪ ಏಳನೇ ದಿನದ ಸಂಜೆ ಹೊತ್ತಿಗೆ ನಿಧಾನವಾಗಿ ಬಣ್ಣ ಬದಲಿಸುತ್ತಿದೆಯಲ್ಲ! ರಾತ್ರಿವೇಳೆಗೆ ಹಸಿರು ಬಣ್ಣದ ಗುರುತೇ ಇಲ್ಲದಂತೆ ಕೆಳಗೆಲ್ಲಾ ಹಳದಿ ಬಣ್ಣ ಮತ್ತು ಮೇಲಿನ ಸ್ವಲ್ಪ ಭಾಗದ ಕಂದು ಬಣ್ಣಕ್ಕೆ ತಿರುಗಿದೆ! ನಾನು ಇದುವರೆಗೂ ಸುಮಾರು 12 ವಿಧದ ಚಿಟ್ಟೆಗಳನ್ನು ಪ್ಯೂಪ ಸಮೇತ ತೆಗೆದಿರುವ ಅನುಭವದ ಪ್ರಕಾರ, ಯಾವ ಪ್ಯೂಪ ಸಂಜೆ ಹೊತ್ತಿಗೆ ಬಣ್ಣ ಬದಲಿಸುತ್ತದೋ ಮರುದಿನ ಖಂಡಿತ ಪ್ಯೂಪವನ್ನು ಬೇಧಿಸಿ ಚಿಟ್ಟೆ ಹೊರಬರುತ್ತದೆ! ಮರುದಿನ ಮುಂಜಾನೆ ನನ್ನ ದಿನಪತ್ರಿಕೆ ಕೆಲಸವನ್ನು ಹುಡುಗರಿಗೆ ವಹಿಸಿ 6 ಗಂಟೆಗೆ ಮನೆಗೆ ಓಡಿಬಂದೆ. ಕ್ಯಾಮೆರಾವನ್ನು ಪ್ಯೂಪ ಮುಂದೆ ಸೆಟ್ ಮಾಡಿ ಕಾಯುತ್ತಾ ಕುಳಿತೆ. ನನ್ನ ಅದೃಷ್ಟಕ್ಕೆ ತೆಳುವಾದ ಬೆಳಕು ಪ್ಯೂಪ ಮೇಲೆ ಬಿದ್ದು ಒಳ್ಳೆ ಪಿಕ್ಟೋರಿಯಲ್ ಬೆಳಕಿನಲ್ಲಿ ಚಿಟ್ಟೆಯ ಚಿತ್ರ ಸೆರೆಹಿಡಿಯುವ ಅವಕಾಶ ಸಿಕ್ಕಿತ್ತು.

ನನ್ನ ಕಣ್ಣು ಕ್ಯಾಮೆರಾ ಕಣ್ಣಿನೊಳಗೆ. ಕಣ್ಣು ನೋವು ಬಂದಾಗ ಹೊರತೆಗೆದು ಅತ್ತ ಇತ್ತ ನೋಡುವುದು. ಹೀಗೆ ಸುಮಾರು ಅರ್ಧಗಂಟೆ ನಡೆಯಿತು.

'ರೀ... ಚಿಟ್ಟೆ ಆಚೆ ಬಂತು... ತೆಗೀರಿ ಫೋಟೋ...' ಎಂದು ಹೇಮಾಶ್ರೀ ಕೂಗಿದಾಗ ಗಡಿಬಿಡಿಯಲ್ಲಿ ಪಟಪಟನೇ ಐದಾರು ಫೋಟೋ ತೆಗೆದಿದ್ದೆ. ಅದೇ ಸಮಯಕ್ಕೆ ಸಣ್ಣಗೆ ಗಾಳಿಯೂ ಬೀಸಿ ಪ್ಯೂಪ ಅಲುಗಾಡಿ ಕೆಲವು ಫೋಟೋಗಳು ಫೋಕಸ್ ಔಟ್ ಆಗಿದ್ದವು. ಎರಡೇ ಕ್ಷಣದಲ್ಲಿ ಚಿಟ್ಟೆಯ ಡೆಲಿವರಿಯಾಗಿ ಅದೇ ಪ್ಯೂಪವನ್ನು ತನ್ನ ಕಾಲುಗಳಿಂದ ಹಿಡಿದುಕೊಂಡು ತಲೆಕೆಳಗಾಗಿ ನೇತಾಡುತ್ತಿತ್ತು.

ಇದೇ ರೀತಿ ಮರುದಿನ ಮೊದಲನೆ ತಮ್ಮ, ಮೂರು ದಿನ ಬಿಟ್ಟು ಕೊನೆಯ ಇಬ್ಬರೂ ತಮ್ಮಂದಿರಲ್ಲಿ ಒಬ್ಬ ಆರು ಗಂಟೆಗೆ, ಮತ್ತೊಬ್ಬ 7-30ಕ್ಕೆ ಡೆಲಿವರಿಯಾಗಿ ನನ್ನ ಕ್ಯಾಮೆರಾದಲ್ಲಿ ಸೆರೆಯಾಗಿದ್ದರು. ಎಂಟು ಗಂಟೆಯ ಹೊತ್ತಿಗೆ ಜೇನು ಹೀರಲು ಹೂಗಳನ್ನರಸಿ ಹಾರಿ ಹೋದವು.

ಈ ಚಿಟ್ಟೆಯ ಹೆಸರು 'ಟ್ರೀ ಎಲ್ಲೋ.' ಇವು 'ಕಾಮನ್ ಗ್ರಾಸ್ ಎಲ್ಲೋ' ಪ್ರಬೇಧಕ್ಕೆ ಸೇರಿದರೂ ಅವು ಗಾತ್ರದಲ್ಲಿ ಸಲ್ಪ ದೊಡ್ಡವು. ಸುಮಾರು 50-60 ಎಮ್ ಎಮ್ ಇರುತ್ತವೆ. ಚಿಟ್ಟೆಗಳಲ್ಲಿ ಎಂಟು ಪ್ರಬೇಧಗಳಿವೆ. ಅವುಗಳೆಂದರೆ: ಅಕ್ರಾಯಿಡೆ, ಡನೈಡೇ, ಹೆಸ್ಪರೈಡೇ, ಲೈಕಾಯಿನಾಡೈ, ನಿಂಪಾಲಿಡೈ, ನೆಮೋಬಿಡೈ, ಪ್ಯಾಪಿಲಿಯಾನಿಡೈ, ಪಿಯಾರಿಡೈ ಮತ್ತು ಸಟ್ಯಾರಿಡೈ, ಈ ಟ್ರೀ ಎಲ್ಲೋ ಚಿಟ್ಟೆಯೂ ಪಿಯಾರಿಡೈ, ಜಾತಿಗೆ ಸೇರಿದೆ. ಇವುಗಳ ಮುಂದಿನ ರೆಕ್ಕೆಗಳು ಮತ್ತು ಹಿಂದಿನ ರೆಕ್ಕೆಗಳು ಹಳದಿ ಬಣ್ಣದಿಂದ ಕೂಡಿದೆ. ಮುಂದಿನ ರೆಕ್ಕೆಗಳಲ್ಲಿ ಎರಡು ಕಪ್ಪು ಬಣ್ಣದ ಕಲೆಗಳು ಇದ್ದು, ಎರಡು ರೆಕ್ಕೆಗಳ ಮೇಲೆ ಅಲ್ಲಲ್ಲಿ ಕಪ್ಪು ವೃತ್ತಗಳಿವೆ.

'ಟ್ರೀ ಎಲ್ಲೋ' ಚಿಟ್ಟೆಯೂ ಆಲ್ಬಿಜಿಯಾ ಅನ್ನುವ ಮುಳ್ಳಿನ ಗಿಡದ ಎಲೆಗಳ ಮೇಲೆ ಸಾಸುವೆಕಾಳಿಗಿಂತ ಚಿಕ್ಕದಾದ ಮೊಟ್ಟೆಗಳನ್ನು ಇಡುತ್ತದೆ. ಮೊಟ್ಟೆಯೊಡೆದು ಹೊರಬಂದ ಹುಳು (ಇದನ್ನು ಲಾರ್ವ ಅಂತಲೂ ಕರೆಯುತ್ತಾರೆ) ನಿಧಾನವಾಗಿ ಅದೇ ಎಲೆಯನ್ನು ತಿನ್ನುವುದರಿಂದ ಮತ್ತು ಬೆಳೆದು ದೊಡ್ಡದಾಗಿ ಪ್ಯೂಪ ಆಗುವುದು ಅದೇ ಗಿಡದಲ್ಲಿ ಅದ್ದರಿಂದ ಈ ಗಿಡವೇ ಚಿಟ್ಟೆಯ ತವರು ಮನೆ ಎನ್ನಬಹುದು.

ನಿಮಗೆ ಈ ಗಿಡದ ಆಡುಭಾಷೆಯ ಹೆಸರನ್ನು ಗುರುತಿಸಲು ಸಾಧ್ಯವಾದರೆ ಹೇಳಿ. ಇವು ಜಾಲಿಗಿಡ, ದೊಡ್ಡ ಗೋಣಿಸೊಪ್ಪಿನ ಗಿಡ, ನೆಲಬೇಲಿಗಿಡ, ಲಂಟಾನ, ಹೊಂಗೆ ಮರದ ಬಳ್ಳಿಗಳು, ಬ್ಯಾಚುಲರ್ಸ್ ಬಟನ್, ಮೇಲೆ ಕೂರುತ್ತವೆ. ಇವುಗಳು ಆಹಾರಕ್ಕಾಗಿ ಕೆಳದರ್ಜೆಯ ದಾಲ್ಚಿನಿ ಗಿಡ, ಜಾಲಿಗಿಡದ ಹೂಗಳನ್ನು ಆಶ್ರಯಿಸುತ್ತವೆ.

ಈ ವಿಭಾಗದ 'ಕಾಮ್ ಗ್ರಾಸ್ ಎಲ್ಲೋ' ಚಿಟ್ಟೆಯೂ ಇದೇ ರೀತಿ ಇದ್ದರೂ ಎರಡು ರೆಕ್ಕೆಯ ಹಿಂಭಾಗದಲ್ಲಿ ಅರ್ಧ ಚಂದ್ರಾಕೃತಿಯಲ್ಲಿ ಸ್ವಲ್ಪ ಕಪ್ಪು ಬಣ್ಣವಿರುತ್ತದೆ. ಈ ಗಿಡದ ಹೋಸ್ಟ್ ಪ್ಲಾಂಟ್ ಕಾಶಿಯಾ ಟೋರ ಅಂದರೆ, ನಮ್ಮ ಆಡುಭಾಷೆಯಲ್ಲಿ ಅದರಲ್ಲೂ ಉತ್ತರ ಕನ್ನಡದ ಕಡೆ ನಾಯಿ ಶೇಂಗ ಅಂತಲೂ, ದಕ್ಷಿಣಾ ಕರ್ನಾಟಕ ಭಾಗದಲ್ಲಿ ತಂಗಡಿ ಗಿಡ ಅಂತ ಕರೆಯುತ್ತಾರೆ.

ಭಾರತ, ಶ್ರೀಲಂಕಾ, ಪಾಕಿಸ್ತಾನ, ಬಾಂಗ್ಲಾದೇಶ, ಬರ್ಮಾ, ಮಲೇಶಿಯಾ, ಥಾಯ್ಲೆಂಡ್, ಇಂಡೋನೇಷಿಯಾ, ಆಫ್ರಿಕಾ, ಮಡ್ಗಾಸ್ಕರ್, ಮಾರಿಷಶ್, ಫುಜಿ, ಜಪಾನ್, ಟಾಂಗ, ನ್ಯೂ ಗಿನಿಯಾ, ಕೊರಿಯಾ, ಆಸ್ಟ್ರೇಲಿಯಾ ಮತ್ತು ದಕ್ಷಿಣ ಪೂರ್ವ ಚೀನದಲ್ಲಿ ಇವು ಕಂಡುಬರುತ್ತವೆ.